SRI DEVARAJ URS ACADEMY OF HIGHER EDUCATION & RESEARCH
SRI DEVARAJ URS MEDICAL COLLEGE
Tamaka, Kolar
UNIVERSITY LIBRARY & LEARNING RESOURCE CENTRE
Online Newspaper Clipping Service
ಉದಯವಾಣಿ
Dtd- Thursday, 30th, August- 2018
Page No.02

# ಅರಸು ವೈದ್ಯ ಸಂಸ್ಥೆಯಲ್ಲಿ ವಾಕ್ ಶ್ರವಣ ವಿಭಾಗ

**ಕೋಲಾರ:** ನಗರದ ಶ್ರೀ ದೇವರಾಜ ಅರಸು ಉನ್ನತ ಶಿಕ್ಷಣ ಹಾಗೂ ಸಂಶೋಧನಾ ಸಂಸ್ಥೆ ನೂತನವಾಗಿ ವಾಕ್ ಶ್ರವಣ ವಿಭಾಗವನ್ನು ಪ್ರಾರಂಭಿಸಿದೆ. ಸಂಸ್ಥೆಯ ಉಪಕುಲಪತಿ ಡಾ.ಸಿ.ವಿ.ರಘುವೀರ್ ಬುಧವಾರ ಬೆಳಗ್ಗೆ ನೂತನ ವಿಭಾಗವನ್ನು ಉದ್ಘಾಟಿಸಿದರು. ಸಂಸ್ಥೆಯ ಕುಲಸಚಿವ ಡಾ.ಎ.ವಿ.ಎಂ.ಕುಟ್ಟಿ, ವೈದ್ಯಕೀಯ ಅಧೀಕ್ಷಕ ಡಾ.ವಿ.ಲಕ್ಷ್ಮಯ್ಯ, ಪ್ರಾಂಶುಪಾಲ ಡಾ.ಎಂ.ಎಲ್.ಹರೇಂದ್ರಕುಮಾರ್ ಹಾಗೂ ಸಂಸ್ಥೆಯ ಇತರ ಹಿರಿಯ ಅಧಿಕಾರಿಗಳು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು. ಈ ವಿಭಾಗ ವಿಶ್ವವಿದ್ಯಾಲಯದ ನಾಲ್ಕನೇ ಮಹಡಿಯಲ್ಲಿದ್ದು ಚಿಕಿತ್ಸಾ ಸೇವೆಗಳು ಕಿವಿ, ಮೂಗು, ಗಂಟಲು ವಿಭಾಗದಲ್ಲಿ ನಡೆಯುತ್ತದೆ. ಸಂವಹನ ತೊಂದರೆ (ಮಾತು, ಭಾಷೆ ಹಾಗೂ ಕಿವಿ ಕೇಳದಿರುವ) ಇರುವ ವ್ಯಕ್ತಿಗಳಿಗೆ ಚಿಕಿತ್ಸೆ ಹಾಗೂ ತರಬೇತಿ ನೀಡುವ ಎಲ್ಲಾ ಸೌಕರ್ಯಗಳನ್ನು ಹೊಂದಿದೆ.

ನಿಮ್ಹಾನ್ಸ್‌ನ ನಿವೃತ್ತ ನಿರ್ದೇಶಕ ಡಾ.ಜಯರಾಂ ಕೇಂದ್ರದ ಮುಖ್ಯಸ್ಥರಾಗಿದ್ದಾರೆ.



ಕೋಲಾರ ನಗರದ ಶ್ರೀ ದೇವರಾಜ ಅರಸು ಉನ್ನತ ಶಿಕ್ಷಣ ಹಾಗೂ ಸಂಶೋಧನಾ ಸಂಸ್ಥೆಯಲ್ಲಿ ಆರಂಭಿಸಲಾಗಿರುವ ನೂತನ ವಾಕ್ ಶ್ರವಣ ವಿಭಾಗವನ್ನು ಸಂಸ್ಥೆಯ ಉಪಕುಲಪತಿ ಡಾ.ಸಿ.ವಿ.ರಘುವೀರ್ ಉದ್ಘಾಟಿಸಿದರು.

ಕೋಲಾರಪತ್ರಿಕೆ



# ಅರಸು ಕಾಲೇಜಿನಲ್ಲಿ ವಾಕ್‌ಶ್ರವಣ ವಿಭಾಗ



ಕೋಲಾರ ಆ ೨೯

ಟಮಕದ ಶ್ರೀ ದೇವರಾಜ್. ಅರಸ್ ಉನ್ನತ ಶಿಕ್ಷಣ ಹಾಗೂ ಸಂಶೋಧನಾ ಸಂಸ್ಥೆಯು ನೂತನವಾಗಿ ವಾಕ್ ಶ್ರವಣ ವಿಭಾಗವನ್ನು ಪ್ರಾರಂಭಿಸಿದೆ.

ಸಂಸ್ಥೆಯ ಉಪ ಕುಲಪತಿ ಡಾ॥ ಸಿ.ವಿ.ರಘುವೀರ್ ಅವರು ನೂತನ ವಿಭಾಗವನ್ನು ಉದ್ಘಾಟಿಸಿದರು.

ಕುಲಸಚಿವ ಡಾ॥ ಎ.ವಿ.ಎಂ. ಕುಟ್ಟಿ, ವೈದ್ಯಕೀಯ ಅಧೀಕ್ಷಕ ಡಾ॥ ವಿ.ಲಕ್ಷ್ಮಯ್ಯ, ಪ್ರಾಂಶುಪಾಲ ಡಾ॥ ಎಂ.ಎಲ್.ಹರೇಂದ್ರ ಕುಮಾರ್ ಇತರರು ಭಾಗವಹಿಸಿದ್ದರು.

ಅಖಿಲ ಭಾರತ ವಾಕ್ ಶ್ರವಣ ಸಂಸ್ಥೆಯ ನಿವೃತ್ತ ನಿರ್ದೇಶಕ ಡಾ॥ ಜಯರಾಂ ಅವರು ಈ ವಿಭಾಗದ ಮುಖ್ಯಸ್ಥರು.

ಕೋಲಾರಪತ್ರಿಕೆ



# ಆರ್.ಎಲ್. ಜಾಲಪ್ಪ ಆಸ್ಪತ್ರೆಯಲ್ಲಿ ಇಎಸ್ಐ ಚಿಕಿತ್ಸಾಲಯಕ್ಕೆ ಚಾಲನೆ



ಕೋಲಾರ ಅ ೨೯

ನಗರದ ಹೊರವಲಯದ ಟಮಕದ ಆರ್.ಎಲ್.ಜಾಲಪ್ಪ ಆಸ್ಪತ್ರೆ ಮತ್ತು ಸಂಶೋಧನಾ ಕೇಂದ್ರದಲ್ಲಿ ಕಾರ್ಮಿಕರ ರಾಜ್ಯ ವಿಮಾಯೋಜನೆ ಸೌಲಭ್ಯದ ಚಿಕಿತ್ಸಾಲಯವನ್ನು ಪ್ರಾರಂಭಿಸಲಾಯಿತು.

ದೇವರಾಜ ಅರಸ್ ಉನ್ನತ ಶಿಕ್ಷಣ ಮತ್ತು ಸಂಶೋಧನಾ ಅಕಾಡೆಮಿಯ ಕುಲಪತಿ ಡಾ|| ಎಸ್.ಕುಮಾರ್, ಉಪ ಕುಲಪತಿ ಡಾ|| ಸಿ.ವಿ. ರಘುವೀರ್, ಕುಲ ಸಚಿವ ಡಾ|| ಎ.ವಿ.ಎಂ. ಕುಟ್ಟಿ, ದೇವರಾಜ ಅರಸ್ ವೈದ್ಯಕೀಯ ಕಾಲೇಜಿನ ಪ್ರಾಂಶುಪಾಲ ಡಾ|| ಎಂ.ಎಲ್.ಹರೇಂದ್ರ ಕುಮಾರ್, ಕಾರ್ಯ ನಿರ್ವಾಹಕ ಅಭಿಯಂತರ ಹನುಮಂತ ರಾವ್, ಆರ್.ಎಲ್. ಜಾಲಪ್ಪ ಆಸ್ಪತ್ರೆ ವೈದ್ಯಕೀಯ ಅಧೀಕ್ಷಕ ಡಾ|| ವಿ.ಲಕ್ಷ್ಮಯ್ಯನವರ ಸಮಕ್ಷಮದಲ್ಲಿ ಅರಸು ಶಿಕ್ಷಣ ಸಂಸ್ಥೆ ಕಾರ್ಯದರ್ಶಿ ಜಿ.ಎಚ್. ನಾಗರಾಜ್, ನಿರ್ದೇಶಕ ಜೆ. ರಾಜೇಂದ್ರ ಉದ್ಘಾಟಿಸಿದರು.

ಕಾರ್ಮಿಕ ರಾಜ್ಯ ವಿಮಾ ಯೋಜನೆ ಸೌಲಭ್ಯದಿಂದ ಅರಸು ವಿದ್ಯಾಸಂಸ್ಥೆಯಲ್ಲಿ ಕೆಲಸ ಮಾಡುತ್ತಿರುವ ೧೦೪೭ ಸಿಬ್ಬಂದಿ ವರ್ಗದವರು ವೈದ್ಯಕೀಯ ಸೌಲಭ್ಯ ಪಡೆಯಬಹುದಾಗಿದೆ. ಕೋಲಾರ, ಚಿಕ್ಕಬಳ್ಳಾಪುರ ಜಿಲ್ಲೆಗಳ ರಾಜ್ಯ ವಿಮಾ ಯೋಜನೆ ಫಲಾನುಭವಿಗಳು ಈ ವೈದ್ಯಕೀಯ ಸೌಲಭ್ಯವನ್ನು ಆರ್. ಎಲ್. ಜಾಲಪ್ಪ ಆಸ್ಪತ್ರೆಯಲ್ಲಿ ಪಡೆದುಕೊಳ್ಳಬಹುದಾಗಿದೆ.